ಫ್ಯಾಕ್ಸ್ : 22276605
E.Mail: cenhpwd@yahoo.co.in
ದೂರವಾಣಿ :22276601

ಕರ್ನಾಟಕ ಸರ್ಕಾರ

[ಲೋಕೋಪಯೋಗಿ ಇಲಾಖೆ]

ಸಂ:ಮುರಾಹೆ:ತಾಂಸ-1:ಸಇಂ-6:ಆರ್ಥಿಕ ಬಿಡ್:2024-25 / 3388

ಮುಖ್ಯ ಇಂಜಿನಿಯರ್‌ರವರ ಕಛೇರಿ,
ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು.
ದಿನಾಂಕ: 27 FEB 2025

ಇವರಿಗೆ,
ಕಾರ್ಯಪಾಲಕ ಅಭಿಯಂತರರು,
ರಾಷ್ಟ್ರೀಯ ಹೆದ್ದಾರಿ ವಿಭಾಗ,
ಹಾಸನ.

ಮಾನ್ಯರೆ,

ವಿಷಯ: 2023-24ನೇ ಸಾಲಿನಲ್ಲಿ ಕೇಂದ್ರ ರಸ್ತೆ ಮತ್ತು ಮೂಲಸೌಕರ್ಯ ನಿಧಿಯಡಿಯಲ್ಲಿ ಅನುಮೋದನೆಯಾದ ಹಾಸನ ಜಿಲ್ಲೆಯ Package-4 ಕಾಮಗಾರಿಗಳ ಆರ್ಥಿಕ ಬಿಡ್‌ಗೆ ಅನುಮೋದನೆ ನೀಡುವ ಬಗ್ಗೆ.

a) "Improvements to Hanbal-Devrunda Road to Athibeedu – Bannibylu Road from Ch:0.00 to 3.00 Km in Sakleshpur Taluk" (Selected reches) (Job No:CRIF-KNT-2023-24-205)

b) "Improvements to NH-48 to Halebelur-Honkaravalli Road from Ch:0.00 to 0.70 Km & 3.00 to 6.00 Km in Sakleshpur Taluk" (Job No:CRIF-KNT-2023-24-206)

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: PWD 423 FC-1 2018 Bangalore Dated: 24.09.2018.
2. ಈ ಕಛೇರಿಯ ತಾಂತ್ರಿಕ ಮಂಜೂರಾತಿ ಆದೇಶ ಸಂಖ್ಯೆ: 2267 ದಿನಾಂಕ: 07.11.2024.
3. ಅಧೀಕ್ಷಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ವೃತ್ತ, ಬೆಂಗಳೂರು ರವರ ಪತ್ರ ಸಂಖ್ಯೆ: 2651-52 ದಿನಾಂಕ: 15.12.2024.
4. ಸರ್ಕಾರದ ಪತ್ರ ಸಂಖ್ಯೆ:ಲೋಇ 29 ಸಿಆರ್‌ಎಫ್ 2025(ಇ) ದಿ: 13.02.2025

T.A

*****

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿತ ಕಾಮಗಾರಿಯ ಆರ್ಥಿಕ ಬಿಡ್‌ಗೆ ಅನುಮೋದನೆ ಸಂಬಂಧ ಉಲ್ಲೇಖ (3)ರಲ್ಲಿ ಅಧೀಕ್ಷಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ವೃತ್ತ, ಬೆಂಗಳೂರು ರವರ ಪತ್ರದೊಂದಿಗೆ ಸಲ್ಲಿಸಿರುವ ದಾಖಲೆ/ವಿವರಗಳನ್ನು ಹಾಗೂ ಅವರ ಶಿಫಾರಸ್ಸನ್ನು ಪರಿಗಣಿಸಿ ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು ವಲಯದ 2022-23ನೇ ಸಾಲಿನ 2024-25ನೇ ಸಾಲಿಗೆ ಮುಂದುವರಿದ ಚಾಲ್ತಿ ದರಸೂಚಿಯನ್ವಯ ಟೆಂಡರ್‌ಗಿಟ್ಟ ಮೊತ್ತ ರೂ. 4,85,01,671.00 (ನಾಲ್ಕು ಕೋಟಿ ಎಂಬತ್ತೈದು ಲಕ್ಷದ ಒಂದು ಸಾವಿರದ ಆರುನೂರ ಎಪ್ಪತ್ತೊಂದು ರೂಪಾಯಿಗಳು ಮಾತ್ರ) ಗಳಿಗೆ ಹೋಲಿಸಿದಂತೆ ಟೆಂಡರ್‌ನಲ್ಲಿ ಪಾಲ್ಗೊಂಡು ಶೇ.(+) 5.00 (ಶೇಕಡ ಐದು ಬಿಂದು ಸೊನ್ನೆ ಸೊನ್ನೆ ಮಾತ್ರ) ರಷ್ಟು ಅಧಿಕ ಇರುವ ದರಗಳನ್ನು ಸಲ್ಲಿಸಿರುವ L-1 ಗುತ್ತಿಗೆದಾರರಾದ ಶ್ರೀ ರಮೇಶ್‌ಕುಮಾರ್ ಕೊಠಾರಿ, 1ನೇ ದರ್ಜೆ ಗುತ್ತಿಗೆದಾರರು ನಮೂದಿತ ಟೆಂಡರ್ ಮೊತ್ತ ರೂ. 5,09,26,754.00 (ಐದು ಕೋಟಿ ಒಂಬತ್ತು ಲಕ್ಷದ ಇಪ್ಪತ್ತಾರು ಸಾವಿರದ ಏಳುನೂರ ಐವತ್ನಾಲ್ಕು ರೂಪಾಯಿಗಳು ಮಾತ್ರ) ಗಳಿಗೆ (ಜಿ.ಎಸ್.ಟಿ ಹೊರತುಪಡಿಸಿ) ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ಪ್ರದತ್ತವಾದ ಅಧಿಕಾರದನ್ವಯ ಹಾಗೂ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಂತೆ ಸದರಿಯವರ ಆರ್ಥಿಕ ಬಿಡ್ ಅನ್ನು ಅನುಮೋದಿಸಿದೆ.

Scanned with OKEN Scanner

1. ಅನುಮೋದಿತ ಟೆಂಡರ್ ಮೊತ್ತ ರೂ. 5,09,26,754.00 (ಐದು ಕೋಟಿ ಒಂಬತ್ತು ಲಕ್ಷದ ಇಪ್ಪತ್ತು ಸಾವಿರದ ಏಳುನೂರ ಐವತ್ನಾಲ್ಕು ರೂಪಾಯಿಗಳು ಮಾತ್ರ) ಗಳನ್ನು ಮೀರದಂತೆ, ಬಿ.ಓ.ಕ್ಯೂ. ರೀ ಕಾರ್ಯಾದೇಶ ನೀಡತಕ್ಕದ್ದು ಮತ್ತು ಪ್ರತಿಯನ್ನು ಈ ಕಛೇರಿಗೆ ತಪ್ಪದೇ ಸಲ್ಲಿಸತಕ್ಕದ್ದು.

2. ಕಡಿಮೆ ನಮೂದಿಸಿರುವ ಟೆಂಡರ್ ಮೊತ್ತಕ್ಕೆ (Unbalanced amount) ಬ್ಯಾಂಕ್ ಗ್ಯಾರಂಟಿ (Bank Guarantee) ಯನ್ನು ಟೆಂಡರ್ ನಿಯಮಾನುಸಾರ ಪಡೆದು ಟೆಂಡರ್ ಕರಾರು ಮಾಡಿಕೊಳ್ಳುವುದು.

3. ಟೆಂಡರ್‌ನಲ್ಲಿನ ಅಂಶ, ಪರಿಮಾಣ, ದರ, ಟೆಂಡರ್ ಶೇಕಡ, ಟೆಂಡರ್ ಮೊತ್ತ ಮತ್ತೊಮ್ಮೆ ದೃಢೀಕರಿಸಿಕೊಳ್ಳುವುದು.

5. ಕೆಲಸ ವಹಿಸಿಕೊಡುವ ಮುನ್ನ ಸದರಿ ಗುತ್ತಿಗೆದಾರರ ಬಳಿ ಇರುವ ಸಾಮಗ್ರಿ, ಯಂತ್ರೋಪಕರಣ, ತಾಂತ್ರಿಕ ಸಿಬ್ಬಂದಿ, ಇತ್ಯಾದಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ದೃಢೀಕರಿಸಿಕೊಳ್ಳತಕ್ಕದ್ದು.

6. ಟೆಂಡರ್ ಕರಾರು ಮಾಡಿಕೊಳ್ಳುವ ಮುನ್ನ ಸದರಿ ಕಾಮಗಾರಿಯ ಅಂದಾಜು ಮೊತ್ತಕ್ಕೆ ಅನ್ವಯಿಸುವ Standard Tender Document ರೀತ್ಯಾ ಕಡ್ಡಾಯವಾಗಿ ಎಲ್ಲಾ ವಿಧಿ ನಿಯಮ ಪಾಲಿಸತಕ್ಕದ್ದು.

7. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸುವ ಅವಧಿಯನ್ನು ಈಗಾಗಲೇ ಟೆಂಡರ್‌ನ ಅಧಿಸೂಚನೆಯಲ್ಲಿ ನಿಗಧಿಸಿದ ಅವಧಿ ಮೀರದಂತೆ ನೋಡಿಕೊಳ್ಳತಕ್ಕದ್ದು.

8. ಸದರಿ ಕಾಮಗಾರಿ ಪೂರ್ಣಗೊಳಿಸಲು ಅವಶ್ಯಕ ಎಲ್ಲಾ ಅಂಶಗಳನ್ನು ಪರಿಗಣಿಸಿ ಈಗಾಗಲೇ ನಿಗಧಿಪಡಿಸಿದ ಅವಧಿಗೆ ಸೀಮಿತಗೊಳಿಸಿ PERT Chart, Bar Chart ತಯಾರಿಸಿ ತೃಪ್ತಿಕರವಾಗಿ ವಿಶಿಷ್ಟ ವಿವರಣೆಯಂತೆ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.

9. ಕಾಮಗಾರಿಗೆ ಉಪಯೋಗಿಸುವ ಸಾಮಗ್ರಿ ಮತ್ತು ಪೂರ್ಣಗೊಂಡ ಅಂಶಗಳ ಗುಣಮಟ್ಟದ ಬಗ್ಗೆ ಸಕ್ಷಮ ಗುಣನಿಯಂತ್ರಣ ಅಧಿಕಾರಿಗಳಿಂದ ದೃಢೀಕರಣ ಪಡೆಯತಕ್ಕದ್ದು.

10. ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ, ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ನವದೆಹಲಿ ರವರ ಪತ್ರ ಸಂಖ್ಯೆ:RW/BNG/GENN/CRF/121/2020 ದಿನಾಂಕ: 13.03.2024 ರ ಆದೇಶದಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ವಯ ಕಾರ್ಯಪಾಲಕ ಅಭಿಯಂತರರವರು ಕಡ್ಡಾಯವಾಗಿ ಕ್ರಮ ವಹಿಸತಕ್ಕದ್ದು.

11. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಲೋಇ:06:ಸಿ.ಆರ್.ಎಫ್:2024(ಇ) ಬೆಂಗಳೂರು ದಿನಾಂಕ: 29.08.2024ರಲ್ಲಿ ಉಲ್ಲೇಖಿಸಿರುವ ಷರತ್ತುಗಳನ್ವಯ ಕಾರ್ಯಪಾಲಕ ಅಭಿಯಂತರರವರು ಕಡ್ಡಾಯವಾಗಿ ಕ್ರಮವಹಿಸತಕ್ಕದ್ದು.

12. ಸರ್ಕಾರದ ಸುತ್ತೋಲೆ ಸಂಖ್ಯೆ:LAW-LAC/198/2024 ದಿನಾಂಕ:16.11.2024ರಂತೆ ಗುತ್ತಿಗೆ ಕರಾರಿನಲ್ಲಿ ಅರ್ಬಿಟ್ರೇಷನ್ ಕ್ಲಾಸ್‌ಗೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರವರು ಕಡ್ಡಾಯವಾಗಿ ಕ್ರಮವಹಿಸತಕ್ಕದ್ದು.

13. ಗುತ್ತಿಗೆದಾರರಿಂದ BID VALIDITY EXTENTION ಪಡೆಯತಕ್ಕದ್ದು.

ತಮ್ಮ ವಿಶ್ವಾಸಿ,

(signature) 27/02/25

ಮುಖ್ಯ ಇಂಜನಿಯರ್ ಪರವಾಗಿ
ರಾಷ್ಟ್ರೀಯ ಹೆದ್ದಾರಿಗಳು, ಬೆಂಗಳೂರು.

ಕರಡು ಪ್ರತಿ ಮು.ಇಂ ರವರಿಂದ ಅನುಮೋದಿಸಲ್ಪಟ್ಟಿದೆ.

Signature Not Verified
Digitally signed by RANGAIAH JAYANNA
Date: 2025.03.11 18:42:36 IST
Location: eProcure-EPROC

Scanned with OKEN Scanner